# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ

**CC No :252/2019**

| | | |
|---|---|---|
| CW : 1 | | PW: 1 |
| ಹೆಸರು | : | ಬಸವರಾಜ |
| ತಂದೆಯ ಹೆಸರು | : | ಮಾಣಿಕಪ್ಪ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಪಿ. ಎಸ್. ಐ |
| ಸ್ಥಳ | : | ಕಲಬುರಗಿ |

**(ದಿನಾಂಕ: 04-03-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ**

ನಾನು ಮಾಡಬೂಳ ಪೊಲೀಸ್ ಠಾಣೆಯಲ್ಲಿ ಜುಲೈ 2016 ರಿಂದ ಜುಲೈ-2021 ರವರೆಗೆ ಎ. ಎಸ್. ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ದಿಃ 08-12-2018 ರಂದು ಸಾಯಂಕಾಲ 05-45 ಕ್ಕೆ ನಾನು ಠಾಣೆಯಲ್ಲಿದ್ದಾಗ ಹುಸೇನಪಾಶಾ ಪಿ. ಎಸ್.ಐ ರವರು ಬೆಳಗಾವಿ ಅಧಿವೇಶ ಬಂದೊಬಸ್ತ ಕರ್ತವ್ಯದಲ್ಲಿದ್ದಾಗ ನನಗೆ ಫೋನ್ ಮಾಡಿ ಭಾತ್ಮಿ ವಿಷಯ ತಿಳಿಸಿದ್ದೇನೆಂದರೆ ಕಾಟಮದೇವರಹಳ್ಳಿ ಕಾಗಿನ ನದಿಯಿಂದ ಒಂದು ಟ್ರಾಕ್ಟರನಲ್ಲಿ ಅನಧಿಕೃತವಾಗಿ ಮರಳು ತುಂಬಿಕೊಂಡು ಪೇಠಶಿರೂರ ಮಾರ್ಗವಾಗಿ ಬೆನ್ನೂರ (ಬಿ) ಕಡೆಗೆ ಬರುತ್ತಿದೆ ಅಂತಾ ಬಾತ್ಮಿ ತಿಳಿಸಿ ದಾಳಿ ಮಾಡಲು ಸೂಚಿಸಿದ್ದರಿಂದ ಮೇಲಾಧಿಕಾರವರ ಮಾರ್ಗದರ್ಶನದಂತೆ ನಾನು ಚಾಸಾ-2 ರಿಂದ 5 ರವರನ್ನು ಬರಮಾಡಿಕೊಂಡು ಅವರಿಗೆ ಬಾತ್ಮಿ ವಿಷಯ ತಿಳಿಸಿ ನಾವೆಲ್ಲರೂ ಠಾಣೆಯಿಂದ 06-15 ಕ್ಕೆ ಒಂದು ಖಾಸಗಿ ವಾಹನದಲ್ಲಿ ಹೊರಟು 06-45 ಕ್ಕೆ ಸ್ಥಳಕ್ಕೆ ತಲುಪಿ ವಾಚ್ ಮಾಡಿ ನೋಡಲಾಗಿ 06-55 ಕ್ಕೆ ಕಾಟಮದೇವರಹಳ್ಳಿಯ ಗ್ರಾಮದ ಕಡೆಯಿಂದ ಒಂದು ಟ್ರಾಕ್ಟರ ಬರುತಿದ್ದು, ನಾವೆಲ್ಲರೂ ದಾಳಿ ಮಾಡಿದಾಗ ಚಾಲಕನು ಟ್ರಾಕ್ಟರನ್ನು ನಿಲ್ಲಸಿ ಓಡಿ ಹೋಗಿರುತ್ತಾನೆ. ಸದರಿ ಟ್ರಾಕ್ಟರನ್ನು ಪರಿಶೀಲಿಸಲಾಗಿ ಅದು ಕೆಂಪು ಬಣ್ಣದ ಮಹಿಂದ್ರಾ ಸರಪಂಚ ಟ್ರಾಕ್ಟರ ಇದ್ದು, ನಂಬರ್ ಪ್ಲೇಟ್ ಇರಲಿಲ್ಲ. ಸದರಿ ಟ್ರಾಕ್ಟರನ್ನು ಪರೀಶೀಲಿಸಲಾಗಿ ಅದರಲ್ಲಿ ಮರಳು ತುಂಬಿದ್ದು, ಮರಳು ಸಾಗಾಟನೆಗಾಗಿ ಪರವಾನಗಿಯನ್ನು ಕಂಡುಬಂದಿರುವುದಿಲ್ಲ. ಆಗ ನಾನು ಚಾಸಾ-2 ಮತ್ತು 3 ರವರ ಸಮಕ್ಷಮ ರಾತ್ರಿ 07:00 ರಿಂದ 08:00 ಗಂಟೆಯವರೆಗೆ ಸರ್ಚ ಲೈಟ್ ಬ್ಯಾಟರಿ ಬೆಳಕಿನಲ್ಲಿ ಸ್ಥಳದಲ್ಲಿಯೇ ಜಪ್ತಿ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಂತರ ಎಲ್ಲರೂ ಠಾಣೆಗೆ ಮರಳಿ ನಾನು ಸರ್ಕಾರದ ತರಫಿ ಚಾಸಾ-8 ರವರಿಗೆ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು

ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2 (ಎ) ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿದರೆ ಗುರುತಿಸಬಲ್ಲೆ, ಆರೋಪಿತರು ಈಗ ಗೈರುಹಾಜರಿದ್ದು, ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ. ಟ್ರಾಕ್ಟರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ವಾಹನದ ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಸಿ.ಎಸ್.ಪಿ.ವಕೀಲರಿಂದ**

ದಿಃ 08-12-2018 ರಂದು ನಾನು ಹಾಗೂ ನಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ರೇಡ ಪಂಚನಾಮೆ ಜರುಗಿಸಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಯಾವುದೇ ಜಪ್ತಿ ಪಂಚನಾಮೆಯನ್ನು ಮಾಡದೇ ಇದ್ದರೂ ಸಹ ಖೊಟ್ಟಿ ಫಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಸಂಖ್ಯೆಗೋಸ್ಕರ ಖೊಟ್ಟಿ ಪಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೆ. ಸರಿ ಇದೆ.**
**-Sd-**
**ಸಿವಿಲ್ ನ್ಯಾಯಾಧೀಶರು, ಶಹಬಾದ.**